2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 198/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸಂಜಯ್ | ಪಿಡಬ್ಲೂ -8 |
| ತಂದೆಯ ಹೆಸರು | - | ವಿಜೇಂದ್ರ | ಸಿಡಬ್ಲೂ - 14 |
| ವಯಸ್ಸು | - | 25 ವರ್ಷ | |
| ಉದ್ಯೋಗ | - | ದಿನಸಿ ಅಂಗಡಿ | |
| ವಾಸ ಸ್ಥಳ | - | ಅರವಿಂದನಗರ, ಚಿಕ್ಕಮಗಳೂರು | |

ದಿನಾಂಕಃ 30-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಫ್ರಾಸಾ.1 ಸಂತೋಷ್ ಗೊತ್ತು, ಆತ ನಾನು ಪದವಿ ವ್ಯಾಸಂಗ ಮಾಡುತ್ತಿದ್ದಾಗ ನನ್ನ ಸಹಪಾಠಿಯಾಗಿದ್ದನು, ಅಂದಿನಿಂದ ಆತ ನನ್ನ ಸ್ನೇಹಿತ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು, ಆತ ಫ್ರಾಸಾ.1 ರವರ ಅಣ್ಣ. ಮೃತ ಸುಧಾ ಗೊತ್ತು, ಆಕೆ ಫ್ರಾಸಾ.1 ಮತ್ತು ಆರೋಪಿಯ ಅಮ್ಮ. ಚಾಸಾ.15 ಗೊತ್ತು, ಆಕೆ ನನ್ನ ಚಿಕ್ಕಮ್ಮ. ಫ್ರಾಸಾ.1 ಮತ್ತು ಆರೋಪಿ ಅವರ ತಾಯಿಯೊಂದಿಗೆ ಚಿಕ್ಕಮಗಳೂರಿನ ಗೌರಿಕಾಲುವೆಯಲ್ಲಿ ವಾಸವಾಗಿದ್ದರು. ನಾನು ಚಿಕ್ಕಮಗಳೂರಿನ ಅರವಿಂದನಗರದಲ್ಲಿ ವಾಸವಾಗಿದ್ದೇನೆ.

2. ಸುಧಾರವರು ಈಗ್ಗೆ 2 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ಆ ಸಮಯದಲ್ಲಿ ನಾನು ಅರವಿಂದನಗರದಲ್ಲಿರುವ ನನ್ನ ಚಿಕ್ಕಮ್ಮನಾದ ಚಾಸಾ.15 ರವರ ಮನೆಯಲ್ಲಿ ವಾಸವಾಗಿದ್ದೆನು. ನಾನು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಿನಿಂದ ಚಾಸಾ.15 ರವರ ಮನೆಯಲ್ಲಿಯೇ ವಾಸವಾಗಿದ್ದೇನೆ ಮತ್ತು ಆ ಸಮಯದಲ್ಲಿ ಚಾಸಾ.15 ರವರ ಇನ್ನೂ ಕೆಲವು ಸಂಬಂಧಿಕರ

ಮಕ್ಕಳು ಮತ್ತು ನಾನು ಒಟ್ಟಿಗೆ ಅವರ ಮನೆಯಲ್ಲಿ ವಾಸವಾಗಿದ್ದೆವು ಮತ್ತು ಆ ರೀತಿ ವಾಸಿಸಲು ನಾವು ಚಾಸಾ.15 ರವರಿಗೆ ತಿಂಗಳಿಗೆ ಇಂತಿಷ್ಟಂತೆ ಹಣವನ್ನು ಕೊಡುತ್ತಿದ್ದೆವು.

3. ದಿನಾಂಕ 23.09.2021 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಗೌರಿಕಾಲುವೆಯಲ್ಲಿ ವಾಸವಾಗಿದ್ದ ಫ್ರಾಸಾ.1 ರವರನ್ನು ಮಾತನಾಡಿಸಲು ಅವರ ಮನೆಗೆ ಹೋಗಿದ್ದೆನು. ಆಗ ಅವರ ಮನೆಯಲ್ಲಿ ಫ್ರಾಸಾ.1, ಆರೋಪಿ ಮತ್ತು ಅವರ ತಾಯಿ ಸುಧಾ ಇದ್ದರು. ಅಲ್ಲಿಗೆ ಹೋದ ಸ್ವಲ್ಪ ಸಮಯದ ಬಳಿಕ ಚಾಸಾ.15 ರವರು ನನಗೆ ಫೋನ್ ಮಾಡಿ ನನಗೆ ಹುಷಾರಿಲ್ಲ ಆಸ್ಪತ್ರೆಗೆ ಹೋಗಬೇಕು ಬಾ ಎಂದು ಕರೆದರು. ಆಗ ನಾನು ಫ್ರಾಸಾ.1 ರವರನ್ನು ಕುರಿತು ನನ್ನ ಜೊತೆ ಬರುತ್ತೀಯಾ ಎಂದು ಕೇಳಿದೆನು. ಆಗ ಫ್ರಾಸಾ.1 ರವರು ಅವರ ಮನೆಯಲ್ಲಿ ಹೇಳಿ ನನ್ನೊಂದಿಗೆ ಬಂದನು. ನಂತರ ನಾವಿಬ್ಬರೂ ಚಾಸಾ.15 ರವರ ಮನೆಗೆ ಹೋಗಿ ಚಾಸಾ.15 ರವರನ್ನು ಕರೆದುಕೊಂಡು ಚಿಕ್ಕಮಗಳೂರಿನ ಹೋಲಿಕ್ರಾಸ್ ಆಸ್ಪತ್ರೆಗೆ ಹೋದೆವು. ಅಲ್ಲಿ ವೈದ್ಯರು ಅವರನ್ನು ಪರೀಕ್ಷಿಸಿ ರಕ್ತ ಪರೀಕ್ಷೆ ಮಾಡಿದರು. ರಿಪೋರ್ಟ್ ಬರುವಷ್ಟರಲ್ಲಿ ಮಧ್ಯಾಹ್ನ 1.30 ಯಿಂದ 2.00 ಗಂಟೆಯಾಗಿತ್ತು. ನಂತರ ಅದನ್ನು ವೈದ್ಯರಿಗೆ ತೋರಿಸಿದಾಗ ಅವರು ಚಾಸಾ.15 ರವರನ್ನು ಚಿಕಿತ್ಸೆಗೆ ದಾಖಲಿಸಬೇಕು ಎಂದು ಹೇಳಿದರು. ನಂತರ ನಾನು ಮತ್ತು ಫ್ರಾಸಾ.1 ರವರು ಚಾಸಾ15 ರವರನ್ನು ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲು ಮಾಡಿ ಸಂಜೆ 5.00 ಗಂಟೆಗೆ ಅಲ್ಲಿಂದ ಹೊರಟೆವು.

4. ನಂತರ ನಾನು ಮತ್ತು ಫ್ರಾಸಾ.1 ರವರು ಫ್ರಾಸಾ.1 ರವರ

ಮನೆಗೆ ಹೋದೆವು. ಆಗ ಸಮಯ ಸಂಜೆ 5.30 ಗಂಟೆಯಾಗಿತ್ತು. ಫ್ರಾಸಾ.1 ರವರ ಮನೆ ಮೊದಲನೇ ಮಹಡಿಯಲ್ಲಿತ್ತು. ಮೇಲೆ ಹೋದ ಫ್ರಾಸಾ.1 ರವರು ಕಿರುಚಿಕೊಂಡರು, ಕೆಳಗೆ ಇದ್ದ ನಾನು ಅವರು ಕಿರುಚಿದ ಶಬ್ದವನ್ನು ಕೇಳಿ ಮೇಲೆ ಹೋದೆನು, ಆಗ ಅಕ್ಕಪಕ್ಕದ ಮತ್ತು ಮೇಲಿನ ಮನೆಯವರು, ಕೆಳಗಿನ ಅಂಗಡಿಯವರು ಮತ್ತು ಮನೆಯ ಮಾಲೀಕರು ಎಲ್ಲರೂ ಬಂದರು. ಮನೆಯ ಮುಂಭಾಗಿಲಿನ ಹಿಂದೆ ಸುಧಾರವರ ಮೃತ ದೇಹವಿತ್ತು. ಅದು ರಕ್ತದ ಮಡುವಿನಲ್ಲಿ ಬಿದ್ದಿತ್ತು. ನೆಲದ ಟೈಲ್ಸ್ ಮೇಲೆ ರಕ್ತ ಬಿದ್ದಿತ್ತು. ಆರೋಪಿ ಮನೆಯ ಒಳಗೆ ಟಿ ವಿ ಸ್ಟಾಂಡ್ ಹತ್ತಿರ ನಿಂತಿದ್ದನು. ಫ್ರಾಸಾ.1 ರವರು ಬಾಗಿಲ ಬಳಿ ಅಳುತ್ತಾ ಕುಳಿತಿದ್ದರು. ನಂತರ ಅವರು ಆರೋಪಿಯನ್ನು ಕುರಿತು ಏನು ಮಾಡಿದೆ ಎಂದು ಕೇಳಿದರು. ಆಗ ಆರೋಪಿ ಸುಧಾರವರ ಬಳಿ ಖರ್ಚಿಗೆ ಹಣವನ್ನು ಕೇಳಿದಾಗ ಆಕೆ ಕೊಡದಿದ್ದ ಕಾರಣಕ್ಕೆ ಆಕೆಯನ್ನು ಕೊಲೆ ಮಾಡಿದ್ದಾಗಿ ತಿಳಿಸಿದನು. 5-10 ನಿಮಿಷದ ಬಳಿಕ ಬಸವನಹಳ್ಳಿ ಪೊಲೀಸರು ಅಲ್ಲಿಗೆ ಬಂದರು. ಪೊಲೀಸರು ಆರೋಪಿಯನ್ನು ಏನು ಮಾಡಿದೆ ಎಂದು ಕೇಳಿದಾಗ ಆತ ಮನೆಯ ಹಾಲಿನಲ್ಲಿದ್ದ ಎರಡನೇ ಬೆಡ್ ರೂಮಿನಿಂದ ಬಟ್ಟೆಗಳನ್ನು ತಂದು ತೋರಿಸಿದನು.

5. ನಂತರ ಪೊಲೀಸರು ಫ್ರಾಸಾ.1 ರವರಿಗೆ ಠಾಣೆಗೆ ಬಂದು ದೂರು ನೀಡಿ ಎಂದು ಹೇಳಿ ಆರೋಪಿ ಕೊಟ್ಟ ಬಟ್ಟೆಗಳನ್ನು ತೆಗೆದುಕೊಂಡು ಆರೋಪಿಯನ್ನು ಠಾಣೆಗೆ ಕರೆದುಕೊಂಡು ಹೋದರು.

6. ಸಾಕ್ಷಿಯು ಈಗಾಗಲೇ ನಿಪಿ.3, ನಿಪಿ.4, ನಿಪಿ.5, ನಿಪಿ.6 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ನೋಡಿ ಆ ದಿನ ನಾನು ಫ್ರಾಸಾ.1 ರವರ ಮನೆಗೆ ಹೋದಾಗ ಮನೆಯ ಮುಂಬಾಗಿಲಿನ ಹಿಂಭಾಗ ರಕ್ತದ ಮಡುವಿನಲ್ಲಿ ಬಿದ್ದಿದ್ದ ಸುಧಾರವರ ಮೃತ ದೇಹ ಕಂಡು ಬರುವುದಾಗಿ ನುಡಿದಿರುತ್ತಾರೆ. ದಿನಾಂಕ 07.10.2021 ರಂದು ಪೊಲೀಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡರು.

(ಈ ಹಂತದಲ್ಲಿ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ